International Journal of Kannada Research
www.kannadajournal.com

ISSN: 2454–5813
IJKR 2017; 3(4): 127-129
© 2017 IJKR
www.kannadajournal.com
Received: 21-08-2017
Accepted: 22-09-2017

**ಪ್ರಮೀಳ.ಜಿ**
ಸಂಶೋಧನಾ ವಿದ್ಯಾರ್ಥಿನಿ
ಡಾ॥ ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. ಕರ್ನಾಟಕ

**ಡಾ॥ ಪಿ.ಎಂ.ಗಂಗಾಧರಯ್ಯ**
ಸಹಾಯಕ ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು, ಡಾ॥ ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. ಕರ್ನಾಟಕ

**Correspondence**
**ಪ್ರಮೀಳ.ಜಿ**
ಸಂಶೋಧನಾ ವಿದ್ಯಾರ್ಥಿನಿ
ಡಾ॥ ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. ಕರ್ನಾಟಕ

# ತುಮಕೂರು ಜಿಲ್ಲೆಯ ಕೃಷಿ ಹಬ್ಬಗಳು

**ಪ್ರಮೀಳ.ಜಿ, ಡಾ॥ ಪಿ.ಎಂ.ಗಂಗಾಧರಯ್ಯ**

## ಪೀಠಿಕೆ

ತುಮಕೂರು ಜಿಲ್ಲೆಯ ಕರ್ನಾಟಕದ ರಾಜಧಾನಿ ಬೆಂಗಳೂರಿನಿಂದ ಅರವತ್ತೈದು ಕಿ.ಮೀ ದೂರದಲ್ಲಿದೆ. ಅಪೂರ್ವ ಜಾನಪದ ಸಂಸ್ಕೃತಿ ಅನನ್ಯ ಕವಿಪರಂಪರೆ ಮೈ ನವಿರೇಳಿಸುವ ಗುಡಿಗೋಪುರಗಳು ಸರ್ವಧರ್ಮ ಸಹಿಷ್ಣುತೆಗಳಿಂದ ತುಮಕೂರು ಭಾರತೀಯ ಸಂಸ್ಕೃತಿಯಲ್ಲಿ ಅನನ್ಯತೆ ಗಳಿಸಿದೆ.

ಹಳ್ಳಿಯ ದೈನಂದಿನ ಜನಜೀವನಕ್ಕೆ ಹಬ್ಬಗಳು ಹೆಚ್ಚು ಮೆರುಗನ್ನು ನೀಡುತ್ತವೆ. ನಿರಂತರವಾದ ದುಡಿಮೆಯ ಜೀವನದ ಏಳು ಬೀಳುಗಳಿಂದ ಜರ್ಜರಿತವಾದವರಿಗೆ ಹಬ್ಬಗಳು ಪುನಶ್ಚೇತನ ನೀಡಿ ಮತ್ತೆ ದೈನಂದಿನ ಜೀವನದಲ್ಲಿ ತೊಡಗಿಸಿಕೊಳ್ಳಲು ಇವು ಸಹಾಯಕವಾಗುತ್ತವೆ. ಕರ್ನಾಟಕದ ಎಲ್ಲಾಕಡೆ ಆಚರಿಸುವಂತಹ ಹಬ್ಬಗಳಲ್ಲದೆ ಸ್ಥಳಿಯವಾದ ಕೆಲವು ಹಬ್ಬಗಳನ್ನು ತಾಲ್ಲೂಕಿನಲ್ಲಿ ಆಚರಿಸುತ್ತಾರೆ. ಯಥಾಪ್ರಕಾರ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಅವರದೇ ಪ್ರತ್ಯೇಕ ಹಬ್ಬಗಳನ್ನು ಆಚರಿಸುತ್ತಾರೆ ಹಬ್ಬಗಳ ಅನುಕ್ರಮಣಿಕೆಯಲ್ಲಿಯೇ ವರ್ಷವನ್ನು ವಿಂಗಡಿಸಿಕೊಳ್ಳವ ಕ್ರಮವು ಜಾನಪದದಲ್ಲಿ ಕಂಡುಬರುತ್ತದೆ.

ಯುಗಾದಿ, ಬಸವಜಯಂತಿ, ಕಾರಹುಣ್ಣಿಮೆ, ಪೀರಲುಹಬ್ಬ, ಶ್ರಾವಣ, ಗೋಕುಲಾಷ್ಟಮಿ, ದೀಪಾವಳಿ, ಮಹಾನವಮಿ, ಮಕರ ಸಂಕ್ರಮಣ, ಶಿವರಾತ್ರಿ, ಹೋಳಿಹಬ್ಬಗಳನ್ನು ತಾಲ್ಲೂಕಿನ ಬಹುತೇಕ ಹಳ್ಳಿಗಳಲ್ಲಿ ಆಚರಿಸುತ್ತಾರೆ ಪ್ರಾದೇಶಿಕ ಪದ್ಧತಿಗುನುಗುಣವಾಗಿ ಕೆಲವು ಕಡೆ ಕೆಲವೊಂದು ಹಬ್ಬಗಳು ಆಚರಣೆಯಿಂದ ಕೈತಪ್ಪಿ ಹೋಗಿರಬಹುದು ಆದರೂ ಯಗಾದಿ, ಪೀರಲುಹಬ್ಬ, ಮಹಾನವಮಿ, ಶಿವರಾತ್ರಿ, ನಾಗರಪಂಚಮಿ ತಾಲ್ಲೂಕಿನಾದ್ಯಂತ ಆಚರಿಸುವ ಮಹತ್ವದ ಹಬ್ಬಗಳು ಇದಲ್ಲದೇ ಮುಸ್ಲಿಮರು ರಂಜಾನ್ ಬಕ್ರೀದ್ ಈದ್ಮಿಲಾದ್ ಮೊದಲಾದ ಹಬ್ಬಗಳನ್ನು ಕ್ರಿಶ್ಚಿಯನ್ನರು ಗುಡ್‌ಫ್ರೈಡೆ ಕ್ರಿಸ್ಮಸ್ ಮೊದಲಾದ ಹಬ್ಬಗಳನ್ನು ಆಚರಿಸುತ್ತಾರೆ.

## ಯುಗಾದಿ

ತುಮಕೂರು ತಾಲ್ಲೂಕಿನಾದ್ಯಂತ್ರ ಚೈತ್ರ ಶುದ್ಧ ಪ್ರತಿಪದೆಯಂದ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಯುಗಾದಿ ಹೆಸರೇ ಹೇಳುವಂತೆ ವರ್ಷದ ಆರಂಭದ ಸಲುವಾಗಿ ಬೇವು ಬೆಲ್ಲ ಹಂಚಲಾಗುತ್ತದೆ. ಯುಗಾದಿಯಂದು ಬನ್ನಿ ಮುಡಿಯುವ ಬೇಟೆಯಾಡುವ ಸಂಪ್ರದಾಯವಿದೆ ಯುಗಾದಿ ಹಬ್ಬಕ್ಕೆ ಮನೆ ದೇವಾಲಯ ಸುಗ್ಗಿ ಬಣ್ಣ ಬಳಿದು ಶೃಂಗಾರಗೊಳಿಸಲಾಗುತ್ತದೆ ಕೆಲವೊಂದು ಹಳ್ಳಿಗಳ ಗುಡಿಗಳಲ್ಲಿ ಪೂಜೆ ಭಜನೆಗಳನ್ನು ನಡೆಸುವದು ಇದೆ.

## ಬಸವ ಜಯಂತಿ

ಪ್ರತಿವರ್ಷ ವೈಶಾಖದ ಅಕ್ಷಯ ತೃತೀಯಾ ರೋಹಿಣಿಯಂದು ಬಸವಜಯಂತಿಯನ್ನು ವೀರಶೈವ ಧರ್ಮದ ಪ್ರಮುಖ ಪ್ರತಿಪಾದಕನಾದ ಬಸವಣ್ಣನ ಹಬ್ಬದ ಹುಟ್ಟಿದ ದಿನದ ನೆನಪಿಗಾಗಿ ಆಚರಿಸಲಾಗುತ್ತದೆ. ಆದರೆ ಗ್ರಾಮೀಣ ಪ್ರದೇಶಲ್ಲಿ ಬಸವಣ್ಣನೆಂದರೆ ಶಿವನ ವಾಹನವಾದ ನಂದಿಯೇ ಇದ್ದಂತೆ ಎಂದು ಅವರು ಆ ಬಸವನಿಗೆ ಪೂಜೆ ಪುನಸ್ಕಾರ ನಡೆಸುತ್ತಾರೆ ಕೆಲವು ಕಡೆ ಸ್ಥಳೀಯರಿಂದ ಶಿವಶರಣರ ಕಥಾಪ್ರವಚನ ನಡೆಯುತ್ತದೆ. ಸ್ಥಳೀಯರು ಇಲ್ಲದಿದ್ದರೆ ಬೇರೆ ಕಡೆಗಳಿಂದ ಪುರಾಣ ವಾಚಕರನ್ನು ಕರೆತರುವುದೂ ಇದೆ ಯಥಾಪ್ರಕಾರ ಗುಡಿ ಹಾಗೂ ಮನೆಗಳ ಶೃಂಗಾರ ನಡೆಯುತ್ತದೆ ಗುಡಿಗಳಲ್ಲಿ ಭಜನೆ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳಿರುತ್ತದೆ.

**ದೀವಣಿಗೆ ಹಬ್ಬ**

ಈ ಹಬ್ಬವು ಕೃಷಿ ಹಿನ್ನೆಲೆಯಿಂದ ಬಂದಿದೆ ರೈತರು ವರ್ಷವಿಡೀ ಶ್ರಮಪಟ್ಟು ಮಾಡಿದ ಕೃಷಿ ಕೈಗೆ ಬರುವ ಸಂಭ್ರಮದ ಕಾಲ. ಹಾಗೆಯೇ ಈ ಹಬ್ಬದಲ್ಲಿ ಹಬ್ಬವನ್ನು ಆಚರಿಸುವ ಹಿಂದಿನ ದಿನ ಮೂರು ದಿನಗಳ ಕಾಲ ದನಕಾಯುವ ಹುಡುಗರು ಅಥವಾ ಕೆಲಸದವರು ಕಾಡಿನಲ್ಲಿ ಬೆಳೆದಿರುವ ತಂಗಟೆ ಗಿಡದ ಹೂಗಳನ್ನು ತಂದು ಗ್ರಾಮದ ಮನೆಗಳ ಮುಂದೆ ಎರಚುವರು. ಹೀಗೆ ಮೂರು ದಿನ ನಡೆಯುತ್ತದೆ ಕೊನೆಯ ದಿನ ಮನೆಯವರು ಮನೆಯ ಮುಂದೆ ದನದ ಸಗಣಿಯಿಂದ ಬೆನಕ ಮಾಡಿ ಅದಕ್ಕೆ ಹುಚ್ಚೆಳು ಮತ್ತು ಚೆಂಡು ಹೂ ಮುಡಿಸುವರು. ಹೊಸದಾಗಿ ಬೆಳೆದ ಅವರೆ, ರಾಗಿ, ಭತ್ತದಕಾಳು, ತುಂಬುದ ಗೊನೆಗಳನ್ನು ತಂದು ಹೊಸ್ತಿಲ ಬಳಿ ಇಟ್ಟು ಪೂಜೆ ಮಾಡುವರು. ಸಂಜೆ ದನಗಳ ಮೈತೊಳೆದು ಅಲಂಕಾರ ಮಾಡಿ ಊರ ದೇವಸ್ಥಾನದ ಮುಂದೆ ಕಿಚ್ಚು ಹಾರಿಸುವ ವಿಶೇಷ ಕಾರ್ಯಕ್ರಮವಿರುತ್ತದೆ.

**ಕಾರಬ್ಬ**

ಈ ಹಬ್ಬವು ಕೃಷಿಗೆ ಸಂಬಂಧಿಸಿದ ಹಬ್ಬ. ಈ ಹಬ್ಬದ ಸಂದರ್ಭದಲ್ಲಿ ದನಗಳನ್ನು ಗಾಡಿ ನೇಗಿಲು ನೊಗ ಕುಂಟೆ ಮೊದಲಾದ ಕೃಷಿ ಉಪಕರಣಗಳನ್ನು ತೊಳೆದು ಮನೆಯ ಹೊರೆಗೆ ಇಡಲಾಗುತ್ತದೆ ಸಂಜೆ ಬಸವಣ್ಣನ ಕೋಡಿಗೆ ನೀಲಿ ಅಥವಾ ಸುನಾರಿ ಪಟ್ಟಿ ಎಣ್ಣೆ ಹಚ್ಚಿ ಅಲಂಕಾರಗೊಳಿಸುತ್ತಾರೆ. ಕೃಷಿ ಉಪಕರಣಗಳಿಗೆ ವಿಭೂತಿ ಕುಂಕುಮವಿಟ್ಟು ಮಾವಿನಸೊಪ್ಪು ಮುಡಿಸಿ ಅಲಂಕಾರಗೊಳಿಸಿ ಮನೆಯಲ್ಲಿ ವಿಶೇಷವಾಗಿ ತಯಾರಿಸಿದ ಕಿಚಡಿ ಅಥವಾ ಪಾಯಸ ಶ್ಯಾವಿಗೆ ಈ ಸಿಹಿ ಅಡಿಗೆಗಳನ್ನು ದನಗಳಿಗೆ ಕೊಡಲಾಗುತ್ತದೆ. ಸಂಜೆ ದೇವರಿಗೆ ವಿಷೇಶ ಪೂಜೆ ಏರ್ಪಾಡಾಗಿರುತ್ತದೆ. ದೇವಸ್ಥಾನದ ಮುಂದೆ ಬೆಂಕಿಯನ್ನು ಹೊತ್ತಿಸಲಾಗುತ್ತದೆ ಜಾನಪದ ವಾದ್ಯಗಳಾದ ತಮಟೆ ಹರೆ ನಗಾರಿ ಬಾರಿಸಲಾಗುತ್ತದೆ. ಎತ್ತರಕ್ಕೆ ಬೆಂಕಿಯನ್ನುಹೊತ್ತಿಸಿ ಅದರ ಮೇಲೆ ದನಗಳನ್ನು ಓಡಿಸಲಾಗುವುದು ಇದನ್ನು ಕಿಚ್ಚು ಹಾರಿಸುವುದು ಎಂದು ಕರೆಯಲಾಗುತ್ತದೆ. ಯುವಕರು ಮನರಂಜನೆಗಾಗಿ ಕೋಲಾಟ ಪಟಕುಣಿತ ದೇವರನ್ನು ಹೊರಡಿಸುವುದು ತಮಟೆಕುಣಿತ ಮೊದಲಾದ ಜಾನಪದ ಕಲೆಗಳ ಪ್ರದರ್ಶನಗಳಲ್ಲಿ ಭಾಗವಹಿಸುತ್ತಾರೆ.

**ಪೀರಲು ಹಬ್ಬ (ಮೊಹರಂ)**

ಮೂಲತಃ ಮುಸ್ಲಿಂ ಸಮುದಾಯದ ಪಿಂಚಾರರ ಹಬ್ಬವಾದ ಇದನ್ನು ಹಿಂದೂ ಮತ್ತು ಮುಸ್ಲಿಂ ಸಮುದಾಯದವರು ಸೇರಿ ಅನ್ಯೋನ್ಯತೆಯಿಂದ ಆಚರಿಸುತ್ತಾರೆ. ಈ ಹಬ್ಬವನ್ನು ಮುಸ್ಲಿಂಮರಿಗಿಂತಲೂ ಹೆಚ್ಚು ಆಸಕ್ತಿಯಿಂದ ಇತರೆ ಜಾತಿಯವರು ಆಚರಿಸುತ್ತಾರೆ. ಅಂದು ಪೀರಲುದೇವರು ಗುಡಿಯಿಂದ ಪೀರಲು ದೇವರನ್ನು ಹೊರಡಿಸುತ್ತಾರೆ. ಈ ಮರವಣಿಗೆಯಲ್ಲಿ ಹುಲಿವೇಷ ಕರಡಿವೇಷ ಸ್ತ್ರೀವೇಷ ಮೊದಲಾದ ಬಗೆಬಗೆಯ ವೇಷಗಳನ್ನು ಹಾಕಿಕೊಂಡು ಮೆರವಣಿಗೆ ಮಾಡಲಾಗುತ್ತದೆ. ಈ ವೇಷಗಳು ಮೆರವಣಿಗೆಯಲ್ಲಿ ಮನೆಮನೆಗೆ ಬರುವುದು ಇದೆ. ಈ ಹಬ್ಬ ಕೇವಲ ಆಚರಣೆ ಮಾತ್ರವಾಗಿರದೆ ಧಾರ್ಮಿಕ ಸೌಹಾರ್ಧತೆಯನ್ನು ಬೆಸೆಯುವುದರಿಂದ ಇದರ ಪ್ರಸ್ತುತತೆಯನ್ನು ಗಮನಿಸಬೇಕಿದೆ.

**ನಾಗರಪಂಚಮಿ**

ಶ್ರಾವಣಮಾಸದಲ್ಲಿ ಬರುವ ನಾಗರಪಂಚಮಿ ಪ್ರಮುಖವಾದ ಹಬ್ಬ. ಗ್ರಾಮಸ್ಥರೆಲ್ಲ ಅಂದು ಹುತ್ತಕ್ಕೆ ಹಾಲೆರೆದು ಪೂಜಿಸುತ್ತಾರೆ. ಶ್ರಾವಣ ಮಾಸವಿಡೀ ಈ ಹಬ್ಬವನ್ನು ಆಚರಿಸುವುದೇ ಇದರ ವೈಶಿಷ್ಟ್ಯ ಹಾಗಾದುದರಿಂದ ಆಚರಣೆಗಳಲ್ಲಿ ಇದು ಬಹುದೀರ್ಘ ದಿನಗಳ ಆಚರಣೆಯಾಗಿದೆ. ಸೋಮವಾರ, ಶುಕ್ರವಾರ, ಶನಿವಾರ, ವಿಶೇಷ ದಿನಗಳು ಈ ದಿನಗಳಲ್ಲಿ ಗುಡಿಗಳಲ್ಲಿ ಪೂಜೆಯಾಗುತ್ತದೆ ಅದರಲ್ಲೂ ಶ್ರಾವಣ ಸೋಮವಾರ ಭಕ್ತರಿಗೆ ಪವಿತ್ರವಾದ ದಿನ ಈ ಹಬ್ಬವನ್ನು ಹೆಚ್ಚು ಮೇಲ್ಜಾತಿಯವರು ಆಚರಿಸುವುದು ರೂಢಿ.

**ಗೋಕುಲಾಷ್ಟಮಿ**

ಗೋಕುಲಾಷ್ಟಮಿ ದಿನದಂದು ಲಿಂಗಾಯತರನ್ನುಳಿದು ಇತರೆ ಜಾತಿಯವರು ವೈಷ್ಣವ ಗುಡಿಗಳಲ್ಲಿ ಪೂಜೆ ನಡೆಸುತ್ತಾರೆ. ಮುಖ್ಯವಾಗಿ ಗೊಲ್ಲರಹಟ್ಟಿಯಲ್ಲಿ ಈ ಹಬ್ಬ ವಿಜೃಂಭಣೆಯಿಂದ ನಡೆಯುತ್ತದೆ ಹರಿಕಥೆ ಭಾಗವಂತಗಳ ಪಾರಾಯಣ ನಡೆಯುತ್ತದೆ.

**ಚೌತಿ**

ಈ ಹಬ್ಬವು ಜಿಲ್ಲೆಯ ಪ್ರಮುಖ ಹಬ್ಬಗಳಲ್ಲೊಂದಾಗಿದೆ. ಪಟ್ಟಣದ ಗಲ್ಲಿಗಳಲ್ಲಿ ಗಣೇಶನ ಮೂರ್ತಿಯನ್ನು ಶೃಂಗರಿಸಿ ಮರೆವಣಿಗೆ ಹೊರಡಿಸಿ ವಿಸರ್ಜನೆ ಮಾಡುತ್ತಾರೆ. ಇದಲ್ಲದೆ ಹಳ್ಳಿ ಹಳ್ಳಿಗಳಲ್ಲಿ ಗಣೇಶನಿಗೆ ವಿಶೇಷ ಪೂಜೆ ಮಾಡುತ್ತಾರೆ.

**ಮಕರ ಸಂಕ್ರಾಂತಿ**

ಎಳ್ಳಮವಾಸ್ಯೆಯ ಆಸುಪಾಸಿನಲ್ಲಿ ಬರುವ ಇನ್ನೊಂದು ದೊಡ್ಡ ಹಬ್ಬ ಮಕರ ಸಂಕ್ರಾಂತಿ. ಮಾಗಿಯ ಚಳಿ ಒಂದಿಷ್ಟು ಬಿಸಿಲು ತನ್ನ ಶಕ್ತಿಯನ್ನು ಪ್ರದರ್ಶಿಸಲು ಸಜ್ಜಾಗುತ್ತಿರುವ ಕಾಲ. ಹಿಂಗಾರಿ ಹೊಲಗಳಲ್ಲಿ ಸೀತನಿ ಸುಲಗಾಯಿ ನಮ್ಮನ್ನು ಬಳಸಿಕೊಂಡು ಆಸ್ವಾದಿಸಿ ಎಂದು ಕರೆಕೊಡುತ್ತಿರುತ್ತದೆ.

ಸಂಕ್ರಾಂತಿಗೆ ಒಂದು ದಿನ ಮುಂಚಿತವಾಗಿ ಹೊಲದಿಂದ ಕಬ್ಬು, ಸುಲಗಾಯಿ, ಗೆಣಸ, ಅವರೆಕಾಯಿ, ತಂದು ಬೋಗಿಯದು ದೇವರಿಗೆ ಸಮರ್ಪಿಸಿ ತಾವೂ ತಿನ್ನುತ್ತಾರೆ. ಅಂದಿನಿಂದ ಜೋಳ ಬಲಿಯುವವರೆಗೂ ಮಿತ್ರರೊಡನೆ ಬಂಧು ಬಾಂಧವರೊಡನೆ ಚಕ್ಕಡಿ ಕಟ್ಟಿಕೊಂಡು ಹೋಗಿ ಮನೆಯಿಂದ ಬಯ್ದು ತರಹೇವಾರಿ ಚಟ್ನಿ ಬೆಲ್ಲದೊಂದಿಗೆ ತಿನ್ನುವರು ಮೇಲೆ ಮಜ್ಜಿಗೆ ಕುಡಿಯುವುದು ಅದನ್ನ ಅನುಭವಿಸಿಯೇ ತಿಳಿಯಬೇಕು.

ಸಂಕ್ರಾಂತಿ ದಿನ ಬಂಡಿ ಕಟ್ಟಿಕೊಂಡು ಹೋಗಿ ಕೆಲವರು ಪುಣ್ಯಸ್ನಾನ ಮಾಡುವರು. ಸಂಜೆ ಎಳ್ಳು ಬೆಲ್ಲಗಳ ಮಿಶ್ರಣವನ್ನು ಪರಸ್ಪರ ವಿನಿಮಯ ಮಾಡಿಕೊಂಡು ನಾವು ನೀವು ಎಳ್ಳು ಬೆಲ್ಲದಂಗ ಇರೋಣ ಎಂದೂ ಶುಭಾಶಯ ಕೋರುವುದು ಸಂಕ್ರಾಂತಿ ಹಬ್ಬದ ವೈಶಿಷ್ಟ್ಯವಾಗಿದೆ.

**ಉಪಸಂಹಾರ**

ಈ ಮೇಲ್ಕಂಡ ಆಚರಣೆಗಳು ಕಾಲದಿಂದ ಕಾಲಕ್ಕೆ ಪ್ರದೇಶದಿಂದ ಪ್ರದೇಶಗಳ ಕಡೆಗೆ ಬಿನ್ನವಾಗಿರುತ್ತಾ ಹೋಗಿದೆ. ಅಲ್ಲದೆ ಅಧುನಿಕತೆಯ ಪ್ರಭಾವಗಳು ಈ ಹಬ್ಬಗಳ ಮೇಲೆ ಉಂಟಾಗಿದ್ದು ಈ ಹಬ್ಬಗಳನ್ನು ಆಚರಣೆಯಲ್ಲಿ ಸರಳವಾಗಿ ಮಾಡುತ್ತಾರೆ. ಸಮಯದ ಅಭಾವ ಸೋಮಾರಿತನವು ಮನೆಮಾಡಿಕೊಂಡಿದೆ. ಆಚರಣೆಯ ಸಮಯ ಖರ್ಚು ಆಸಕ್ತಿಯು ಕ್ರಮೇಣವಾಗಿ ಜನರೆಲ್ಲ ಕಡಿಮೆಯಾಗುತ್ತಾ ಬಂದಿದೆ. ಪ್ರಾದೇಶಿಕ ವಿಭಿನ್ನತೆಯು ಈ ಅಂಗೀಕರಿಸಿದ ಧಾರ್ಮಿಕ ಮತ್ತು ಮಾಂತ್ರಿಕ ಆಚರಣೆಗಳ ಮೊತ್ತವೇ ಆಚರಣೆ. ಆಚರಣೆಗಳಿಲ್ಲದೆ ಯಾವ ದೈವದ ಅಸ್ತಿತ್ವವೂ ಸಾಧ್ಯವಿಲ್ಲ ನಂಬಿಕೆ ಆಚರಣೆಯ ಬೆನ್ನೆಲುಬು ನಂಬಿಕೆಯ ಸಿದ್ದಾಂತ ಆಚರಣೆಗಳನ್ನು ಮುಂದುವರಿಸಿಕೊಂಡು ಹೋಗುವಂತೆ ಮಾಡುತ್ತದೆ.

**ಪೂರಕ ಗ್ರಂಥಗಳು**


1. ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ (೨೦೧೧)– ತುಮಕೂರು ಜಿಲ್ಲೆಯ ಜಾನಪದೀಯ ನೆಲೆಗಳು, ತುಮಕೂರು ವಿಶ್ವವಿದ್ಯಾನಿಲಯ ತುಮಕೂರು
2. ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ(೨೦೧೧)– ತುಮಕೂರು ಜಿಲ್ಲೆ ಜಾನಪದೀಯ ಅಧ್ಯಯನ, ತುಮಕೂರು ವಿಶ್ವವಿದ್ಯಾನಿಲಯ ತುಮಕೂರು
3. ಡಾ॥ ಎನ್,ನಂದೀಶ್ವರ, (೨೦೦೮), ಶಿರಾ ತಾಲ್ಲೂಕು ದರ್ಶನ –ಪೂರ್ಣಚಂದ್ರ ತೇಜಸ್ವಿ ಪ್ರಕಾಶನ ಶಿರಾ.
4. ಜಾನಪದ ಜಗಲಿ – ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಸಂಪುಟ ೩, ಸಂಚಿಕೆ ೨ ಸೆಪ್ಟಂಬರ್ ೨೦೧೪
5. ಡಾ॥ ಸ.ಚಿ.ರಮೇಶ್ (೨೦೧೦) ಕರ್ನಾಟಕದ ಜನಪದ ಆಚರಣೆಗಳು –ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.